# ಕನ್ನಡ ಸಾಹಿತ್ಯ ಮತ್ತು ವಿಜ್ಞಾನದ ಸಾತತ್ಯ

**ಕುಸುಮ ಬಿ.ಎಂ.**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಕಲಾ ಕಾಲೇಜು, ಬೆಂಗಳೂರು.

**DOI: https://doi.org/10.5281/zenodo.18470819**

**ABSTRACT:**

ವಿಜ್ಞಾನದ ಜಟಿಲ ಸಿದ್ಧಾಂತಗಳು ಮತ್ತು ಸಂಶೋಧನೆಗಳನ್ನು ಸಾಮಾನ್ಯ ಜನರಿಗೆ ತಲುಪಿಸುವಲ್ಲಿ ಕನ್ನಡ ಸಾಹಿತ್ಯವು ನಿರ್ವಹಿಸುತ್ತಿರುವ ಮಹತ್ವದ ಪಾತ್ರವನ್ನು ಈ ಬರಹವು ವಿಶ್ಲೇಷಿಸುತ್ತದೆ. ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ಕಥೆಗಳಲ್ಲಿ ಕಂಡುಬರುವ ಜೀವವಿಕಾಸ, ಪರಿಸರ ವಿಜ್ಞಾನ ಮತ್ತು ವಿಸ್ಮಯಗಳ ಲೋಕವು ಸಾಮಾನ್ಯ ಓದುಗನಲ್ಲಿ ವೈಜ್ಞಾನಿಕ ಪ್ರಜ್ಞೆಯನ್ನು ಹೇಗೆ ಜಾಗೃತಗೊಳಿಸುತ್ತದೆ ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ. ಹಾಗೆಯೇ, ಬಿ.ಜಿ.ಎಲ್. ಸ್ವಾಮಿಯವರ 'ಹಸುರು ಹೊನ್ನು' ಕೃತಿಯ ಮೂಲಕ ಸಸ್ಯಶಾಸ್ತ್ರವು ಸಾಹಿತ್ಯಿಕ ಚೌಕಟ್ಟಿನಲ್ಲಿ ಹಾಸ್ಯ ಮತ್ತು ಕುತೂಹಲದೊಂದಿಗೆ ಮೈದಾಳಿರುವುದನ್ನು ಲೇಖನವು ಗುರುತಿಸುತ್ತದೆ. ಒಟ್ಟಾರೆಯಾಗಿ, ಸಾಹಿತ್ಯವು ವಿಜ್ಞಾನವನ್ನು ಕೇವಲ ಮಾಹಿತಿಯನ್ನಾಗಿಸದೆ, ಮಾನವನ ಅನುಭವದ ಭಾಗವಾಗಿಸಿ ಮೂಢನಂಬಿಕೆಗಳನ್ನು ದೂರಮಾಡುವ ಸಾಧನವಾಗಿರುವ ಬಗೆಯನ್ನು ಈ ಲೇಖನವು ಸ್ಫುಟಗೊಳಿಸುತ್ತದೆ.

**KEYWORDS:**

ಕನ್ನಡ ಸಾಹಿತ್ಯ, ವೈಜ್ಞಾನಿಕ ಪ್ರಜ್ಞೆ, ಪೂರ್ಣಚಂದ್ರ ತೇಜಸ್ವಿ, ಬಿ.ಜಿ.ಎಲ್. ಸ್ವಾಮಿ, ಸಸ್ಯಶಾಸ್ತ್ರ.

ಸಾಮಾನ್ಯ ಜನರ ಯೋಚನಾಶಕ್ತಿಯನ್ನು ಬೆಳೆಯಿಸುವಲ್ಲಿ ವಿಜ್ಞಾನದ ಪಾತ್ರ ಬಹಳ ಮುಖ್ಯವಾದುದು. 'ವಿಜ್ಞಾನ' ಎಂದರೆ ವಿಶೇಷವಾದ ಜ್ಞಾನ. 'Science is the study of facts'. ಇಂಗ್ಲಿಷ್‌ನಲ್ಲಿರುವ ವೈಜ್ಞಾನಿಕ ಬರಹಗಳು ಸಾಮಾನ್ಯ ಜನರಿಗೆ ಅರ್ಥಮಾಡಿಕೊಳ್ಳಲು ಕಷ್ಟವಾಗುತ್ತದೆ. ಹೀಗಾಗಿ ವಿಜ್ಞಾನದ ಸಂಶೋಧನೆಗಳು ಅವರಿಗೆ ತಲುಪದೆ ಹೋಗಬಹುದು. ವಿಜ್ಞಾನಿಗಳು ತಮ್ಮ ಸಂಶೋಧನೆಗಳನ್ನು ಮುಂದುವರಿಸಿಕೊಂಡು ಹೋಗುವುದರ ಜೊತೆಗೆ ವಿಜ್ಞಾನಕ್ಕೆ ಸಂಬಂಧಿಸಿದಂತೆ ಜನಪ್ರಿಯ ಲೇಖನಗಳನ್ನು ಬರೆಯುವುದು ಮತ್ತು ಉಪನ್ಯಾಸ ಕೊಡುವುದು ಮುಖ್ಯವಾಗುತ್ತದೆ ಎನ್ನುವ ಎಚ್. ನರಸಿಂಹಯ್ಯನವರ ಮಾತುಗಳು ಗಮನೀಯ.

ವಿಜ್ಞಾನದಲ್ಲಿ ನಡೆದ ಸಂಶೋಧನೆಗಳನ್ನು ಜನರ ತಿಳುವಳಿಕೆಯ ಭಾಗವಾಗಿಸುವ ಪ್ರಯತ್ನ ಕನ್ನಡ ಸಾಹಿತ್ಯದಲ್ಲಿ ತೇಜಸ್ವಿ, ಬಿ.ಜಿ.ಎಲ್. ಸ್ವಾಮಿ, ನಾಗೇಶ್ ಹೆಗಡೆ, ಡಾ. ಎಚ್. ನರಸಿಂಹಯ್ಯ ಮೊದಲಾದವರಿಂದ ನಡೆಯುತ್ತಾ ಬಂದಿದೆ.

ಸಾಹಿತಿಯಾದವನೊಬ್ಬ ವೈಜ್ಞಾನಿಕ ಬರಹಗಳನ್ನು ಬರೆದರೆ ಅದು ಕಥಾರೂಪವನ್ನೇ ಪಡೆಯುತ್ತದೆ. ವೈಜ್ಞಾನಿಕ ಬರಹಗಳು ಎನ್ನಬಹುದಾದ ಚಿಕ್ಕ ಚಿಕ್ಕ

ಕಥೆಗಳನ್ನು ರಚಿಸಿರುವ ಪೂರ್ಣಚಂದ್ರ ತೇಜಸ್ವಿಯವರ ಪ್ರಯತ್ನ ಸಾರ್ಥಕವಾಗಿದೆ. ಕಥೆಗಳಂತೆ ಕುತೂಹಲವನ್ನು ಉಳಿಸಿಕೊಂಡು ಹೋಗುವ ಈ ಬರಹಗಳು ಬಹು ದೊಡ್ಡ ವೈಜ್ಞಾನಿಕ ಸಿದ್ಧಾಂತಗಳನ್ನು, ಸಂಶೋಧನೆಗಳನ್ನು ಓದುಗನ ಅನುಭವಕ್ಕೆ ತರುತ್ತವೆ. ಜೀವ ವಿಜ್ಞಾನ, ಭೌತ ವಿಜ್ಞಾನ, ಭೂ ವಿಜ್ಞಾನ ಹೀಗೆ ಹಲವು ವಿಜ್ಞಾನದ ಶಾಖೆಗಳು ಲೇಖಕರ ಅನುಭವದ ಮೂಲಕ ಮೈದಾಳುತ್ತಾ ಓದುಗರ ಕುತೂಹಲವನ್ನು ಕೆರಳಿಸುತ್ತವೆ. ವಿಜ್ಞಾನದ ಕೌತುಕಗಳು ಎದುರಾಗುತ್ತವೆ. ಇಲ್ಲಿಯ ಬರಹಗಳು/ಕತೆಗಳು ವಿಜ್ಞಾನದ ಸಂಗತಿಗಳನ್ನು ಲಘು ಹಾಸ್ಯ ಮಿಶ್ರಿತ ಧಾಟಿಯಲ್ಲಿ ಹೇಳುವ ಜೊತೆಗೆ ಗಂಭೀರ ಎಚ್ಚರಿಕೆಯನ್ನು ನೀಡುತ್ತವೆ. ಹಾವುಮೀನುಗಳ ವಿಶೇಷ ಸಂತಾನಾಭಿವೃದ್ಧಿ ಚಲನೆಯಲ್ಲಿ ಆಲ್‌ಫ್ರೆಡ್ ವ್ಯಾಗ್ನರ್‌ನ ಸಿದ್ಧಾಂತದ ಸಾಕ್ಷಿಯನ್ನು ಕಾಣಬಹುದು. ಭೂಮಿಯ ಮೇಲಿನ ಹಕ್ಕಿಗಳ ವಲಸೆ ಮತ್ತು ಹಾವುಮೀನುಗಳ ವಲಸೆ, ಹಾರುವ ಓತಿಯ ಜೀವನ ಎಲ್ಲವೂ ಭೂಮಿ ಮೇಲಿನ ವಿಕಾಸದ ಪಥವನ್ನು, ಸೃಷ್ಟಿಯ ಮುಂದುವರಿಕೆಯನ್ನು ತಿಳಿಸುತ್ತವೆ. ಬದುಕಿ ಉಳಿಯುವುದೇ ಇಲ್ಲಿಯ ಮೂಲಮಂತ್ರವೆನಿಸಿದೆ.

ಇಕಾಲಜಿ (ಪರಿಸರದ) ಹಿನ್ನೆಲೆಯಲ್ಲಿ ಇಡೀ ವಿಶ್ವವನ್ನು ಪರಿವೀಕ್ಷಿಸುವ ತೇಜಸ್ವಿಯವರ ಬರಹಗಳು ಭೂಮಿಯ ಮೇಲಿನ ಜೀವ ವಿಕಾಸ, ಭೂಮಿ, ಬ್ರಹ್ಮಾಂಡದ ಹುಟ್ಟಿನ ಬಗೆಗೆ ಇರುವ ಸಿದ್ಧಾಂತಗಳು, ಭೂಮಿಯ ರಚನೆ ಮತ್ತು ಸ್ವರೂಪದಲ್ಲಿ ಕಾಲದಿಂದ ಕಾಲಕ್ಕೆ ಆಗಿರುವ ಬದಲಾವಣೆಗಳ ಮೇಲೆ ಬೆಳಕು ಚೆಲ್ಲುತ್ತವೆ.

ಜಗತ್ತಿನಲ್ಲಿರುವ ಕೌತುಕಗಳನ್ನು ಕತೆಯಂತೆ ಕಟ್ಟಿಕೊಡುವ ಲೇಖಕರು ವಿಜ್ಞಾನದ ಅಂಶಗಳನ್ನು ಯಾವುದೇ ಗೊಂದಲವಿಲ್ಲದೆ ಎಲ್ಲರೂ ಅರ್ಥೈಸಿಕೊಳ್ಳುವಂತೆ ವಿವರಿಸಿದ್ದಾರೆ. ಉದಾಹರಣೆಗೆ ಧ್ರುವಗಳ ಚಲನೆ – ಒಮ್ಮೆ ಧ್ರುವವಲಯವಾಗಿದ್ದ ಪ್ರದೇಶ ಈಗಿನ ಅತ್ಯುಷ್ಣ ಮರುಭೂಮಿ ಸಹಾರಾ ಆಗಿದೆ. ವಿಶ್ವಸ್ಥಾಯಿ ಸಿದ್ಧಾಂತ – ವಿಶ್ವಸ್ಫೋಟವಾದದಂತಹ ಜಟಿಲ ಸಿದ್ಧಾಂತಗಳನ್ನು ಸರಳವಾಗಿ ವಿವರಿಸಿದ್ದಾರೆ.

ಅವರ ಕಥಾ ಸಂಕಲನಗಳು ಜನರ ಮೂಢನಂಬಿಕೆಯ ಜತೆಗೆ ವಿಜ್ಞಾನದ ಸತ್ಯಾಂಶಗಳ ಮೇಲೆಯೂ ಬೆಳಕು ಚೆಲ್ಲುತ್ತಾ ಸಾಗುತ್ತದೆ. ಇಲ್ಲಿ ಬರುವ ಪ್ರತಿಯೊಂದು ಅನಕ್ಷರಸ್ಥ ಪಾತ್ರಗಳು ಸಂಶೋಧನೆ ನಡೆಸಿದಂತೆ ಕಾಣಿಸಿಕೊಳ್ಳುತ್ತಾ ನಮ್ಮ ಗಮನ ಸೆಳೆಯುತ್ತವೆ. ಹಾವುಮೀನಿನ ಬಗೆಗೆ ಸಾಕಷ್ಟು ಮಾಹಿತಿ ಬಲ್ಲ ಚೀಂಕ್ರ ಮೇಸ್ತ್ರಿ ಲೇಖಕರಿಗೆ ಅರಿಸ್ಟಾಟಲನಂತೆ ಕಾಣುತ್ತಾನೆ.

ಅವರ ಕಾದಂಬರಿ ಕರ್ವಾಲೊದಲ್ಲಿ ಬರುವ ಮುಗ್ಧ ಮಂದಣ್ಣ ಮೂರರ ಮುಂದೆ ಏಳು ಸೊನ್ನೆಗಳನ್ನು ಹಾಕುವಷ್ಟು ಪುರಾತನ ಜೀವಿಯಾದ ಹಾರುವ ಓತಿಯನ್ನು ಕಂಡವನಾಗಿದ್ದಾನೆ.

ಅವರ ಪರಿಸರದ ಕತೆಗಳು ಹಾಗೂ ಏರೋಪ್ಲೇನ್ ಚಿಟ್ಟೆ ಮತ್ತು ಇತರ

ಕತೆಗಳು ಬಹು ವಿಶಿಷ್ಟವಾಗಿ ಮನುಷ್ಯ ಮತ್ತು ಪ್ರಾಣಿ, ಪಕ್ಷಿಗಳ ಸಂಬಂಧಗಳನ್ನು ವಿವರಿಸುತ್ತವೆ. ಮಾರ, ಬೈರ, ಅಪ್ಪಣ, ಪ್ಯಾರ ಮೊದಲಾದ ಮಲೆನಾಡಿನ ಸಾಮಾಜಿಕ ಪರಿಸರದ ವ್ಯಕ್ತಿಗಳು ಆ ಮಲೆನಾಡಿನ ಸುತ್ತಲೂ ಇರುವ ಕಾಡಿನ ಸಸ್ಯ ಮತ್ತು ಪ್ರಾಣಿಗಳ ಕುರಿತಾಗಿ ಹೊಂದಿರುವ ಜ್ಞಾನ ಮತ್ತು ಅವುಗಳನ್ನು ಲೋಕಕ್ಕೆ ಪರಿಚಯಿಸುವ ಯಾವುದೇ ಜರೂರು ಇಲ್ಲದೆ ಅಸಡ್ಡೆಯಿಂದ ಬದುಕುವುದು ಲೇಖಕರಿಗೆ ವಿಶೇಷವಾಗಿ ತೋರುತ್ತದೆ. ಅಲ್ಲಿನ ಜನರಿಗೆ ಪ್ರಾಣಿ ಪಕ್ಷಿಗಳೆಂದರೆ ಭಕ್ಷಿಸುವ ಪದಾರ್ಥಗಳೇ ವಿನಃ ಅದರಿಂದಾಚೆಗೆ ಯಾವುದೇ ಕುತೂಹಲವನ್ನು ಕೆರಳಿಸುವುದಿಲ್ಲ. ಯಾವುದೋ ಕಾಲದಲ್ಲಿ ಬದುಕಿದ್ದ ಡೈನೋಸರ್‌ಗಳ ಬಗೆಗೂ ಮಾರನಿಗೆ ಇದೇ ಅಭಿಪ್ರಾಯವಿರುವುದನ್ನು ಗಮನಿಸಬಹುದು. ಇಂತಹ ಮನುಷ್ಯ ಲೋಕದ ಜೊತೆ ಅಲ್ಲಿನ ಕಾಡು, ಆ ಜೀವಿಗಳು ವಿಚಿತ್ರ ರೀತಿಯಲ್ಲಿ ಸಂಸರ್ಗವನ್ನು ಹೊಂದಿವೆ.

ಅಲ್ಲಿಯ ಯಾವುದೋ ಒಂದು ಬಳ್ಳಿಗೆ ಕಾಲು ಬಂದು ಓಡಿಹೋಗಿ ಇವರಿಗೆ ತೊಂದರೆ ಕೊಡುವ ಶಕ್ತಿಯಿದೆ, ಈ ರೀತಿಯ ನಂಬಿಕೆಯುಳ್ಳ ಮಾರನ ಕತೆಗಳು ಕಾಡಿನ ಶಕ್ತಿಯ ಅಗಾಧತೆಯನ್ನು ನಮ್ಮ ಅರಿವಿಗೆ ತರುತ್ತವೆ. ನಂಬಲು ಯಾವುದೇ ಆಧಾರಗಳಿಲ್ಲದೆ, ನಂಬಿಸುವ ಯಾವುದೇ ವಿಶೇಷ ಪ್ರಯತ್ನವೂ ಕಾಣದೆ ಕಾಡಿನ ಪ್ರಚಂಡ ಶಕ್ತಿಯ ವಿಸ್ಮಯತೆಯನ್ನು ಈ ಕತೆಗಳು ನಮಗೆ ಮಾಡಿಸುತ್ತವೆ. ಹುಲಿಹಂದಲು ದೊರೆಗೆ ಕತ್ತಿ ಪೆಟ್ಟಿನ ಗಾಯದ ಗುರುತು ಇಲ್ಲದೆ ಗುಣಮುಖನಾದ ಮಾರ ಬಹು ಅಮೂಲ್ಯ ನಿಧಿಯನ್ನು ಬಲ್ಲವನಾಗಿ ಕಾಣುತ್ತಾನೆ. ಆ ಒಂದು ಗಿಡಕ್ಕಾಗಿ ತನ್ನ ಇಡೀ ಆಸ್ತಿಯನ್ನೇ ಬರೆದು ಕೊಡಲು ಸಿದ್ಧನಾಗುವ ದೊರೆಯ ಮುಂದೆ ಮಾರನ ಉದಾಸೀನತೆ ನಮಗೆ ಕಾಡು ಉಳಿದು ಬರಲು ಕಾರಣವಾಗಿರುವ ಅಂಶಗಳು ಇಲ್ಲಿ ಕಾಣುತ್ತವೆ. ಬಿ.ಜಿ.ಎಲ್. ಸ್ವಾಮಿಯವರ 'ಹಸುರು ಹೊನ್ನು' ಕೃತಿಯನ್ನು ಓದುವಾಗ ಅಲ್ಲಿನ ಒಂದು ಸಸ್ಯ ಮಾರನ ಕತೆಗೆ ಪುಷ್ಟಿ ಕೊಡುವಂತೆ ಇರುವುದು ವಿಶೇಷ. ಇಂತಹ ಗಿಡವನ್ನು ಮನುಷ್ಯನ ಆರೋಗ್ಯದ ದೃಷ್ಟಿಯಿಂದ ಪ್ರತಿಮನೆಯಲ್ಲೂ ಇರಲೇಬೇಕಾದ ಸಸಿಯಾಗಿ ಬೆಳೆಸಬೇಕೆಂದು ಸ್ವಾಮಿಯವರು ಹೇಳುತ್ತಾರೆ. ನೈಸರ್ಗಿಕವಾಗಿ 'ವೈಟಮಿನ್ ಕೆ' ಅನ್ನು ಉತ್ಪಾದಿಸುವ ಈ ಸಿಂಬಿಡಿಯಮ್ ಬೈಕಲಸ್ ಎಂಬ ಸ್ಥಳೀಯವಾಗಿ ಬಹು ಹೆಸರುಗಳಿಂದ ಕರೆಸಿಕೊಳ್ಳುವ ಈ ಸಸ್ಯವು ರೇಂಜರನಿಗೆ ಒಂದು ಗಿಡಕ್ಕೆ ಎಷ್ಟು ಬೆಲೆ ವಿಧಿಸಬಹುದು ಎಂಬ ಆರ್ಥಿಕ ಮೌಲ್ಯದ ಕಡೆಗೆ ಮಾತ್ರ ಗಮನ ಕೆರಳಿಸುತ್ತದೆ. ಇದಕ್ಕೆ ವಿರುದ್ಧವಾಗಿ ವೈದ್ಯರ, ವಿಜ್ಞಾನಿಗಳ ಕುತೂಹಲ ಭಿನ್ನ ರೀತಿಯದು. ಏಕೆಂದರೆ ಈ ಸಸ್ಯದ ರಸ ಗಾಯಕ್ಕೆ ತಗುಲಿದಾಗ ಉರಿಯಾಗದು, ಬಾಧೆಯಾಗದು, ಚರ್ಮವನ್ನು ಒಳಗಿನ ಮಾಂಸಖಂಡಗಳನ್ನು ನಾಶ ಮಾಡುವಂಥದಲ್ಲ.

'ಹಕ್ಕಿಗಳ ಹೆಜ್ಜೆ ಮೂಡದ ಹಾದಿ' ಕತೆಯು ಹೇಗೆ ಹಕ್ಕಿಗಳು ಸೂರ್ಯನ ಚಲನೆ ಮತ್ತು ನಕ್ಷತ್ರಗಳ ಆಧಾರದಿಂದ ದಿಕ್ಕನ್ನು ಗುರುತಿಸುತ್ತವೆ ಎಂಬುದನ್ನು ಪ್ರಯೋಗಗಳ ಮೂಲಕ ಬಹು ಕುತೂಹಲದಿಂದ ವಿವರಿಸುತ್ತದೆ. ಅವುಗಳ ಈ

ಅಸಾಧಾರಣ ಶಕ್ತಿಗೆ ಬೆರಗು ಮೂಡುತ್ತದೆ.

ಸ್ವತಃ ಸಸ್ಯಶಾಸ್ತ್ರ ಪ್ರಾಧ್ಯಾಪಕರಾಗಿರುವ ಬಿ.ಜಿ.ಎಲ್. ಸ್ವಾಮಿಯವರ 'ಹಸುರು ಹೊನ್ನು' ಕೃತಿ ವಿಶಿಷ್ಟವಾದುದು. ನವಿರುಹಾಸ್ಯ, ಸಾಹಿತ್ಯಾಭಿರುಚಿಯ ಜೊತೆಗೆ ಸಸ್ಯಪ್ರಭೇದಗಳನ್ನು, ಅವುಗಳ ಗುಣವನ್ನು ಪರಿಚಯಿಸುತ್ತದೆ.

ಕಾಲಾನುಕಾಲದಿಂದ ನಮ್ಮ ಬದುಕಿನೊಂದಿಗೆ ಒಂದಲ್ಲ ಒಂದು ರೀತಿಯಲ್ಲಿ ಒಡನಾಡಿಗಳಾಗಿ ಬೆಳೆದು ಬಂದಿರುವ ಕೆಲವು ಗಿಡಮರಗಳ ಪರಿಚಯ ಮಾಡಿಕೊಡುವ ಪ್ರಯತ್ನವಾಗಿ 'ಹಸುರು ಹೊನ್ನು' ಕೃತಿಯು ಮೂಡಿಬಂದಿದೆ. ಈ ಕೃತಿಯನ್ನು ಬಿಳಿಆನೆಗೆ ಹೋಲಿಕೆ ಮಾಡಿರುವ ಸ್ವಾಮಿಯವರು ತಮ್ಮ ಮೊದಲ ಪ್ರಯತ್ನದಲ್ಲಿಯೇ ಓದುಗರ ಮನಸ್ಸನ್ನು ಸೆಳೆಯುತ್ತಾರೆ. ಹಾಗೂ ಇದಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಪಡೆದಿದ್ದಾರೆ. ಅದೆಲ್ಲಕ್ಕಿಂತಲೂ ಮಿಗಿಲಾಗಿ "ನೀನು ಕನ್ನಡದಲ್ಲಿ ಬರೆಯುವುದು ಬೇಡ" ಎನ್ನುತ್ತಿದ್ದ ಅವರ ತಂದೆ ಡಿ.ವಿ.ಜಿ.ಯವರಿಂದ "ಕನ್ನಡದಲ್ಲಿ ಇಂಥ ಪುಸ್ತಕಗಳು ಬೇಕು" ಎಂಬ ಪ್ರೋತ್ಸಾಹದ ಮೆಚ್ಚುಗೆಯನ್ನು ಗಳಿಸಿಕೊಂಡಿದ್ದಾರೆ.

ಕೃತಿಯ ನಾಲ್ಕು ಅಧ್ಯಾಯಗಳಲ್ಲಿ ದಕ್ಷಿಣ ಭಾರತದ ನಾಲ್ಕು ಬೇರೆ ಬೇರೆ ಕಾಡುಗಳನ್ನು, ಅಲ್ಲಿಯ ಸಸ್ಯಪ್ರಪಂಚವನ್ನು ನಮ್ಮ ಅರಿವಿಗೆ ತರುತ್ತಾರೆ. ಈ ಕಾಡುಗಳು ಅನೇಕ ಬಗೆಯ ಅಚ್ಚರಿಗಳನ್ನೇ ತಮ್ಮ ಮಡಿಲಲ್ಲಿರಿಸಿಕೊಂಡಿವೆ. ಸಾಮಾನ್ಯ ಕಾಯಿಲೆಗಳಿಂದ ಹಿಡಿದು ದೊಡ್ಡ ದೊಡ್ಡ ರೋಗಗಳಿಗೂ ಮದ್ದಾಗಬಲ್ಲ ಔಷಧೀಯ ಗಿಡಮೂಲಿಕೆಯ ಜತೆಗೆ ಬೃಹದಾಕಾರದ ಬೂರುಗದ ಮರದವರೆಗೂ ಅನೇಕ ಜಾತಿಯ ವೈವಿಧ್ಯಪೂರ್ಣ ಸಸ್ಯಗಳ ಪರಿಚಯವನ್ನು ಇದರಲ್ಲಿ ಮಾಡಿಸುತ್ತಾರೆ. ಈ ಕೃತಿಯ ವಿಶಿಷ್ಟತೆ ಏನೆಂದರೆ ಪ್ರಾಚೀನ ಕಾವ್ಯಗಳಲ್ಲಿಯ ಉಲ್ಲೇಖದ ಜತೆಗೆ ಆ ಸಸ್ಯಗಳ ವೈಜ್ಞಾನಿಕ ಹೆಸರು, ವಿವರಗಳನ್ನು ನೀಡುವುದು. ಸ್ನಾತಕ ಪದವಿಯವರ ಶೈಕ್ಷಣಿಕ ಪ್ರವಾಸದ ಅನುಭವವನ್ನು ಹಂಚಿಕೊಳ್ಳುತ್ತಲೇ ಹವ್ಯಾಸಿಯಾಗಿಯೂ ಸಸ್ಯ ಸಂಗ್ರಹಣೆ ನಡೆಯಬಹುದಾದ ಮಹತ್ವವನ್ನು ತಿಳಿಸಿಕೊಡುತ್ತಾರೆ. ಆ ರೀತಿ ಹವ್ಯಾಸಿ ಸಸ್ಯ ಸಂಗ್ರಹಣೆಯ ವಿಧಾನಕ್ಕೆ ಬೇಕಾಗುವ ಪರಿಕರಗಳನ್ನು ಕೃತಿಯಲ್ಲಿ ನೀಡುತ್ತಾರೆ. ನಿಜವಾಗಿಯೂ ಕೃತಿ ಓದಿದ ಓದುಗರು ತಾವು ಹವ್ಯಾಸಿ ಸಸ್ಯ ಸಂಗ್ರಹಕರಾಗುವುದರಲ್ಲಿ ಸಂದೇಹವಿಲ್ಲ.

ಯಾವ ಉಪಯೋಗಕ್ಕೂ ಬಾರದ ಸಸ್ಯ ಸಂಕುಲವು ಸಹ ತನ್ನ ಸಹಜ ಪರಿಸರದಲ್ಲಿ ತನ್ನದೇ ಛಾಪು ಮೂಡಿಸುವ ಸಂಗತಿ ಆಶ್ಚರ್ಯಕರ. ಕತ್ತಲೆಯಲ್ಲಿ ನವರತ್ನದಂತೆ ಪ್ರಜ್ವಲಿಸುವ ಅಣಬೆ ಬೆಳಕಿನಲ್ಲಿ ಕಂದಿಹೋಗುವ ಅಪರೂಪದ ಚಿತ್ರಣ ಸೃಷ್ಟಿವೈಭವದ ಜತೆಗೆ ವೈಜ್ಞಾನಿಕ ಕುತೂಹಲಕ್ಕೂ ದಾರಿಯಾಗುತ್ತದೆ.

ಅಶೋಕದಂತಹ ಕಣ್ಮರೆಯಾಗಿರುವ ಸಸ್ಯಗಳು ಮಾಧವೀಲತೆಯಂಥ ಸುಕೋಮಲ ಹೂಬಳ್ಳಿಗಳು, ಹೊನ್ನೆ, ನಾಗಸಂಪಗೆಯಂಥ ಅಪರೂಪದ ಸಸ್ಯಪ್ರಭೇದಗಳೊಡನೆ ಮಾವು, ಮೆಣಸುಗಳಂಥ ವಾಣಿಜ್ಯ ಬೆಳೆಗಳು ಕಾಡಿನ

ಸಂಪತ್ತಾಗಿರುವ ಸಂಗತಿಯನ್ನು ಅವುಗಳ ವೈಜ್ಞಾನಿಕ ಹಿನ್ನೆಲೆಯಲ್ಲಿ ಕೃತಿ ಒದಗಿಸುತ್ತದೆ. ಒಂದೇ ಜಾತಿಯ ಸಸ್ಯ ಒಂದೊಂದು ಪರಿಸರದಲ್ಲಿ ಹೇಗೆ ಭಿನ್ನವಾಗಿರುತ್ತದೆ ಎಂಬುದು ಈ ಕೃತಿಯ ಓದಿನೊಡನೆ ಅರಿವಿಗೆ ಬರುತ್ತದೆ.

**ಪರಾಮರ್ಶನ ಗ್ರಂಥಗಳು:**

1. ಪೂರ್ಣಚಂದ್ರ ತೇಜಸ್ವಿ ಕೆ.ಪಿ., (1991), ಪರಿಸರದ ಕತೆ, ಮೈಸೂರು: ಪುಸ್ತಕ ಪ್ರಕಾಶನ.
2. ಪೂರ್ಣಚಂದ್ರ ತೇಜಸ್ವಿ ಕೆ.ಪಿ., (1993), ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕಥೆಗಳು, ಮೈಸೂರು: ಪುಸ್ತಕ ಪ್ರಕಾಶನ.
3. ಸ್ವಾಮಿ ಬಿ.ಜಿ.ಎಲ್., (1977), ಹಸುರು ಹೊನ್ನು, ಬೆಂಗಳೂರು: ಕಾವ್ಯಾಲಯ ಪ್ರಕಾಶಕರು.
4. ಪೂರ್ಣಚಂದ್ರ ತೇಜಸ್ವಿ ಕೆ.ಪಿ., (1980), ಕರ್ವಾಲೊ, ಮೈಸೂರು: ಪುಸ್ತಕ ಪ್ರಕಾಶನ.
5. ಪೂರ್ಣಚಂದ್ರ ತೇಜಸ್ವಿ ಕೆ.ಪಿ., (1993), ವಿಸ್ಮಯ 1, ಮೈಸೂರು: ಪುಸ್ತಕ ಪ್ರಕಾಶನ.
6. ಪೂರ್ಣಚಂದ್ರ ತೇಜಸ್ವಿ ಕೆ.ಪಿ., (1993), ವಿಸ್ಮಯ 2, ಮೈಸೂರು: ಪುಸ್ತಕ ಪ್ರಕಾಶನ.
7. ಪೂರ್ಣಚಂದ್ರ ತೇಜಸ್ವಿ ಕೆ.ಪಿ., (1993), ವಿಸ್ಮಯ 3, ಮೈಸೂರು: ಪುಸ್ತಕ ಪ್ರಕಾಶನ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.